**ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,**

**ಕೊಳ್ಳೇಗಾಲ**

**ಸಿ ಸಿ ಸಂಖ್ಯೆ 1868/2024**

PW-1

ದಿನಾಂಕ 17.03.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಪಿ.ಬಿ. ವಕೀಲರಿಂದಃ**

ನಾನು 10ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನಮಗೆ 9 ಎಕರೆ ಜಮೀನು ಇರುತ್ತದೆ. ಸದರಿ ಜಮೀನುಗಳು ನನ್ನ ಹಾಗೂ ನನ್ನ ಗಂಡನ ಹೆಸರಿನಲ್ಲಿ ಇರುತ್ತವೆ. ಸದರಿ ಜಮೀನುಗಳಲ್ಲಿ ಜೋಳ, ರಾಗಿ ಬೆಳೆಯುತ್ತೇವೆ. ಸದರಿ ಜಮೀನುಗಳು ಮಳೆಯಾಶ್ರಿತ ಬೆಳೆಗಳು ಬೆಳೆಯುವಂತಹ ಭೂಮಿ ಎಂದರೆ ಸರಿ.  ನಮ್ಮ ಬಳಿ ಆಸ್ತಿ ಇದೆ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮಗೆ ಇಬ್ಬರು ಮಕ್ಕಳಿರುತ್ತಾರೆ. ಅವರುಗಳಲ್ಲಿ ಒಬ್ಬರು Hospital Management ಕೋರ್ಸ್ ಓದುತ್ತಿದ್ದಾನೆ ಮತ್ತೊಬ್ಬ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದಾನೆ.

ನಿಪಿ-1ರ ಚೆಕ್ ನ್ನು ಆರೋಪಿ ಬರೆದಿರುತ್ತಾರೆ. ಸದರಿ ಚೆಕ್ ನ್ನು ನಮ್ಮ ಮನೆಯಲ್ಲಿ ದಿನಾಂಕ 20.06.2024 ರಂದು ಬರೆದುಕೊಟ್ಟಿರುತ್ತಾರೆ. ರೂ. 8,40,000/- ಹಣವನ್ನು ನಾನು ರೂ. 500, 200, 100 ಮುಖಬೆಲೆಯ ನೋಟುಗಳಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ಬ್ಯಾಂಕ್ ಖಾತೆಯ ಮುಖಾಂತರ ವರ್ಗಾಯಿಸಬಹುದಿತ್ತು  ಎಂದರೆ ಸಾಕ್ಷಿಯು ನಾವು ಆರೋಪಿಯ ಅಕ್ಕನ ಮನೆಯಲ್ಲಿ ಬಾಡಿಗೆಗೆ ಇದ್ದುದ್ದರಿಂದ ಹಾಗೂ ಅವರು ಒಂದು ತಿಂಗಳಿನಲ್ಲಿ ವಾಪಸ್ಸು ಕೊಡುತ್ತೇವೆ ಎಂದು ಹೇಳಿದ್ದರಿಂದ ನಗದು ರೂಪದಲ್ಲಿ ನೀಡಿರುತೇವೆ.  ರೂ. 8,40,000/- ಹಣವನ್ನು ನೀಡಲು ನಾನು ಆರ್ಥಿಕವಾಗಿ ಸಶಕ್ತಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣ ನೀಡದೇ ಇದ್ದರೂ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ಕರ್ಪೂರ, ಜೋಳ ಇತ್ಯಾದಿ ವ್ಯಾಪಾರ ಮಾಡುತ್ತಾರೆ. ಆರೋಪಿ ಯಾವುದೇ ಅಂಗಡಿಯನ್ನು ತೆರೆದಿರಲಿಲ್ಲ. ನನ್ನ ತಮ್ಮನ ಹೆಸರು ಸುರೇಶ್ ಆಗಿರುತ್ತದೆ. ನನ್ನ ತಮ್ಮ ಹಾಗೂ ಆರೋಪಿ ಸ್ನೇಹಿತರು ಎಂದರೆ ಸರಿ, ಅವರಿಬ್ಬರ ನಡುವೆ ವ್ಯವಹಾರ ನಡೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಚೀಟಿ ವ್ಯವಹಾರ ಮಾಡುವುದಿಲ್ಲ. ದಿನಾಂಕ 20.06.2024 ರಂದು ಆರೋಪಿ ತಮ್ಮ ಹೆಂಡತಿಗೆ ಅನಾರೋಗ್ಯದ ವಿಚಾರವಾಗಿ ಕೊಯಂಬತ್ತೂರಿನ ಖಾಸಗಿ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ದಿನದಿಂದ

ಆರೋಪಿ ತಮ್ಮ ಹೆಂಡತಿಯನ್ನು ಒಳರೋಗಿಯಾಗಿ ದಾಖಲಿಸಿ 21 ದಿನಗಳ ಕಾಲ ಆಸ್ಪತ್ರೆಯಲ್ಲೇ ಇದ್ದರು ಎಂದರೆ ಸರಿಯಲ್ಲ. ನನ್ನ ತಮ್ಮ ಸುರೇಶ ಆರೋಪಿಯ ಚೆಕ್ ನ್ನು ಪಡೆದು ನನ್ನ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1ರ ಪೂರ್ವದಲ್ಲಿ ನನಗೂ, ಆರೋಪಿಗೂ ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಸರಿ. ರೂ. 8,40,000/- ಹಣವನ್ನು ನಾನು ಆರೋಪಿಯ ತಂದೆ, ತಾಯಿಯ ಸಮಕ್ಷಮ ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಅವರ ಹೆಂಡತಿಯ ಸಮಕ್ಷಮ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಣ ನೀಡುವಾಗ ಆರೋಪಿಯ ಹೆಂಡತಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರು ಹಾಗೂ ಆರೋಪಿಗೆ ನೀಡಿರುವ ನೋಟೀಸ್ ನಲ್ಲಿ ಹಣ ನೀಡುವ ಸಮಯದಲ್ಲಿ ಆರೋಪಿಯ ಹೆಂಡತಿ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಅವರು ಚಿಕಿತ್ಸೆ ಪಡೆದುಕೊಂಡು ಸಂತೇಮರಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು, ಅವರು ಯಾವುದೇ ಊರಿಗೆ ಓಡಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ವ್ಯಾಪಾರ ಹಾಗೂ ವ್ಯವಸಾಯದ ಆದಾಯದ ಮೂಲ ಇರುವುದರಿಂದ ಯಾವುದೇ ಸಾಲ ಮಾಡುವ ಅಗತ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.